ಮಾಡುತ್ತಾ ಕಳೆದ ಒಂದು ವರ್ಷದಿಂದ ಆ ಕಾಮಗಾರಿಗಳಿಗೆ ಅಪ್ರೂವಲ್ ಕೊಡದೆ ತೊಂದರೆ ಕೊಡುತ್ತಿದ್ದಾರೆ. ನಾನು ಮಾನ್ಯ ಮಂತ್ರಿಗಳಿಂದ ಎರಡು ವಿಷಯಗಳ ಬಗ್ಗೆ ತಿಳಿಯಬಯಸುತ್ತೇನೆ. ಈ ಟಿಎಸಿ ಯಿಂದ ಈ ಕಾಮಗಾರಿ ಯಾವಾಗ ಕ್ಲಿಯರ್ ಆಗುವುದು ಹಾಗೂ ಸಂಭಾವ್ಯವಾಗಿ ಎಷ್ಟು ತಿಂಗಳ ನಂತರ ಮಾನ್ಯ ಸಚಿವರು ಈ ಕಾಮಗಾರಿ ಬಗ್ಗೆ ಟೆಂಡರ್ ಕರೆಯಬಹುದು ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಮೊದಲು ಮಾಡಿರುವಂಥ ಕಾಮಗಾರಿಯ ವಿನ್ಯಾಸಕ್ಕೂ ಈಗ ಮಾಡುವುದಕ್ಕೆ ಬಹಳ ವ್ಯತ್ಯಾಸವಿದೆ. ನೀರು ಬಹಳ ದೊಡ್ಡ ಪ್ರಮಾಣದಲ್ಲಿ ಹೋಗುತ್ತಿರುವುದರಿಂದ ಅದನ್ನು permanent basis ನಲ್ಲಿ culvert ಮಾಡಿ, ಮಾಡಬೇಕೆನ್ನುವ ದೃಷ್ಟಿಯಿಂದ ಮೂರು ಕೋಟಿ ನಲವತ್ತಾರು ಲಕ್ಷ ರೂಪಾಯಿಗಳ ಪುನರ್ ಅಂದಾಜು ಮಾಡಿದ್ದೇವೆ. ಈಗಾಗಲೇ ಅದು ಟಿಎಸಿ ಮುಂದೆ ಇದೆ. ಕೂಡಲೆ ಇನ್ನೊಂದು ತಿಂಗಳೊಳಗೆ ಅದಕ್ಕೆ ಅನುಮೋದನೆಯನ್ನು ಕೊಟ್ಟು ಕಾಮಗಾರಿಯನ್ನು ಪ್ರಾರಂಭಿಸುತ್ತೇವೆ.

ಬಾಚಣಕಿ ಜಲಾಶಯ

12 (250) ಶ್ರೀ ಪಾಟೀಲ್ ವಿ. ಎಸ್. (ಯಲ್ಲಾಪುರ):– ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮುಂಡಗೋಡ ತಾಲ್ಲೂಕು ಬಾಚಣಕಿ ಜಲಾಶಯದ ವಿಸ್ತೀರ್ಣವೆಷ್ಟು; ಇದರಿಂದ ಪ್ರಯೋಜನ ಪಡೆಯುವ ನೀರಾವರಿ ಕ್ಷೇತ್ರ ಎಷ್ಟು;

ಆ) ಮುಂಡಗೋಡ ತಾಲ್ಲೂಕು ಬಾಚಣಕಿ ಜಲಾಶಯದ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಒತ್ತುವರಿ ಬಿಡುಗಡೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು;

ಇ) ಬಾಚಣಕಿ ಜಲಾಶಯದ ಹೂಳು ತೆಗೆಯುವ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–

ಅ) ಜಲಾಶಯದ ವಿಸ್ತೀರ್ಣ 203 ಹೆಕ್ಟೇರ್, ಇದರಿಂದ ಪ್ರಯೋಜನ ಪಡೆಯಬಹುದಾದ ನೀರಾವರಿ ಕ್ಷೇತ್ರ 1944 ಹೆಕ್ಟೇರ್

ಆ) ಈ ಕೆರೆಯು ಒತ್ತುವರಿಯಾಗಿರುವುದು ಮೇಲ್ನೋಟಕ್ಕೆ ಕಂಡು ಬರುವುದಿಲ್ಲ.

ಜಲಾಶಯದ ಸರ್ವೇಕಾರ್ಯ ಕೈಗೊಂಡು, ಒತ್ತುವರಿ ಕಂಡು ಬಂದಲ್ಲಿ ಅದನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಾಗುವುದು.

ಇ) ಈ ಜಲಾಶಯದ ಹೂಳು ತೆಗೆಯುವ ಪ್ರಸ್ತಾವನೆ ಇರುವುದಿಲ್ಲ. ಆದರೆ 2011–12ನೇ ಸಾಲಿನಲ್ಲಿ 13ನೇ ಹಣಕಾಸು ಆಯೋಗದ ಅನುದಾನದಡಿ ಜಲಾಶಯದ ಪುನರುಜ್ಜೀವನಕ್ಕಾಗಿ ರೂ. 95.00 ಲಕ್ಷ ಅಂದಾಜು ಮೊತ್ತಕ್ಕೆ ಅವಕಾಶ ಕಲ್ಪಿಸಲಾಗಿದೆ.

ಶ್ರೀ ವಿ. ಎಸ್. ಪಾಟೀಲ್:–ಅಧ್ಯಕ್ಷರೆ, ಜಲಾಶಯದ ವಿಸ್ತೀರ್ಣ 203 ಹೆಕ್ಟೇರ್, ಇದರಿಂದ ಪ್ರಯೋಜನ ಪಡೆಯಬಹುದಾದ ನೀರಾವರಿ ಕ್ಷೇತ್ರ 1944 ಹೆಕ್ಟೇರ್ ಎಂದು ಈಗಾಗಲೇ ಅವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಅಷ್ಟು ಹೆಕ್ಟೇರ್‌ಗೆ ಇನ್ನೂ ನೀರು ಉಣಿಸುತ್ತಿಲ್ಲ. ಅದಕ್ಕೂ ನೀರು ಉಣಿಸುವಂಥ ಕಾರ್ಯವನ್ನು ಮಾಡಬೇಕು. ಕೆರೆಯ ಒತ್ತುವರಿಯನ್ನು ಸಾಕಷ್ಟು ಜನ ಮಾಡಿರುವುದಿರಿಂದ ಅದನ್ನು ಬಿಡಿಸುವಂಥ ಕಾರ್ಯ ಆಗಬೇಕು. ಜಲಾಶಯದಲ್ಲಿ ಸಾಕಷ್ಟು ಹೂಳು ತುಂಬಿದೆ. ಅದನ್ನು ತೆಗೆಸುವಂಥ ಕೆಲಸವಾಗಬೇಕು. ಈಗಾಗಲೇ ಈ ಜಲಾಶಯವನ್ನು ಮಾಡಿ 30 ವರ್ಷಗಳಾಯಿತು. ಆದರೆ ಅಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಆಗಿಲ್ಲ. ಅದು ಆಗುವಂತೆ ಮಾಡಿಕೊಡಬೇಕೆಂದು ನನ್ನ ಕಳಕಳಿ ವಿನಂತಿ.

ಶ್ರೀ ಗೋವಿಂದ ಎಂ. ಕಾರಜೋಳ: ಈ ವರ್ಷ 2011–12ನೇ ಸಾಲಿನಲ್ಲಿ 13ನೇ ಹಣಕಾಸು ಆಯೋಗದ ಅನುದಾನದಡಿ ಜಲಶಯದ ಪುನರುಜ್ಜೀವನಕ್ಕಾಗಿ 95.00 ಲಕ್ಷ ರೂಪಾಯಿಗಳ ಅಂದಾಜು ಮೊತ್ತವನ್ನು ಒದಗಿಸಿದ್ದೇವೆ. ನೀರಾವರಿ ಕ್ಷೇತ್ರ 1944 ಹೆಕ್ಟೇರ್ ಇದ್ದರೂ ಕೂಡ 545 ಹೆಕ್ಟೇರ್‌ನಷ್ಟು ನೀರಾವರಿ ಆಗುತ್ತಿದೆ. ಇನ್ನುಳಿದ ಪ್ರದೇಶಕ್ಕೆ ನೀರಾವರಿ ಆಗದೇ ಇರುವುದಕ್ಕೆ ಕಾರಣ ನಾಲೆ ದುರಸ್ತಿ ಇರಬಹುದು, ರೈತರ ಅನಾಸಕ್ತಿಯಿಂದ ತೆಗೆದುಕೊಳ್ಳದೆ ಇರಬಹುದು, ಈ ಕಾರಣದಿಂದಾಗಿ ಆಗಿಲ್ಲ. ಈ ವರ್ಷ 95.00 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈ ಜಲಾಶಯವನ್ನು ದುರಸ್ತಿ ಮಾಡಿಕೊಡುವಂಥ ಕೆಲಸವನ್ನು ಮಾಡುತ್ತೇವೆ.

ಅಧ್ಯಕ್ಷರು: ಶ್ರೀ ಅಭಯ್ ಪಾಟೀಲ್‌ರವರ ಪ್ರಶ್ನೆ ತೋಟಗಾರಿಕೆ ಇಲಾಖೆಗೆ ವರ್ಗಾವಣೆಯಾಗಿದೆ. ಅದು ಮುಂದಿನ ವಾರಕ್ಕೆ ಹೋಗಿದೆ.

ಶ್ರೀ ಅಭಯ್ ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆ. ಇದು ತಪ್ಪಾಗಿ ತೋಟಗಾರಿಕೆ ಇಲಾಖೆಗೆ ಹೋಗಿದೆ. ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸಚಿವರು ಇಬ್ಬರೂ ಇದ್ದಾರೆ. ಅವರು ಉತ್ತರ ಕೊಡಬಹುದು. ಅಧ್ಯಕ್ಷರು ಇದಕ್ಕೆ ಅವಕಾಶ ಕೊಡಬೇಕು.